ಶ್ರೀ ಐ. ಶೋಮಶೇಖರಪ್ಪ.—ಸ್ಪೀಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಕುಡಿ ಕೊಳೆಯುವ ರೋಗದ ಕಾರಣದಿಂದಾಗಿ ತೆಂಗಿನ ಮರಗಳು ಒಣಗಿ ಹೋಗುತ್ತಿವೆ ಎಂದು ಹೇಳಿದ್ದೀರಿ, ಹಾಗಾದರೆ ಆ ತೆಂಗಿನ ಮರಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಆ ರೋಗವನ್ನು ತಡೆಗಟ್ಟಲು ಯಾವ ಯಾವ ಔಷಧಿಯನ್ನು ಉಪಯೋಗಿಸಬೇಕು ಎಂಬುದನ್ನು ಹೇಳುತ್ತೀರಾ ?

† ಶ್ರೀ ಬಿ. ರಾಚಯ್ಯ.—ಈಗ ಯಾವ ಗಿಡಗಳಿಗೆ ರೋಗ ತಗುಲಿದೆಯೋ ಆ ಗಿಡವನ್ನು ಬೇರು ಸಹಿತ ಕಿತ್ತು ಹಾಕಿ ಅದನ್ನು ಸುಟ್ಟು ಹಾಕಿದರೆ, ಮಿಕ್ಕ ಗಿಡಗಳಿಗೆ ಆ ರೋಗ ಹಬ್ಬುವುದಿಲ್ಲ ಎಂದು ತಜ್ಞರು ಸಲಹೆ ಮಾಡಿದ್ದಾರೆ. ಅದು ಸಣ್ಣ ಪ್ರಮಾಣದಲ್ಲಿ ಬಂದಾಗ ಅರ್ಲಿಯರ್ ಸ್ಪ್ರೇಜನಲ್ಲೇ ಅದಕ್ಕೆ copper sulphate ಮಿಕ್ಸ್‌ಚರ್ ಹಾಕಿದರೆ ಆ ರೋಗ ಹೋಗುತ್ತದೆ ಎಂದು ತಿಳಿದುಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ತಜ್ಞರು ಬೇರು ಸಹಿತ ಎಲ್ಲಾ ಗಿಡಗಳನ್ನು ಕಿತ್ತು ಹಾಕ ಬೇಕೆಂದು ಸಲಹೆ ಮಾಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ತೋಟದಲ್ಲಿ ಕೆಲವು ಗಿಡಗಳಿಗೆ ರೋಗ ಬಂದರೆ, ತಕ್ಷಣ ಅವುಗಳನ್ನು ತೆಗೆದುಹಾಕಬೇಕು, ಇಲ್ಲದಿದ್ದರೆ, ಇನ್ನೂ ಅವು ಹರಡುವುದಕ್ಕೆ ಅವಕಾಶವಾಗುತ್ತದೆ ಎಂದು ಸಲಹೆ ಮಾಡಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಈ ರೀತಿ ತೆಂಗಿನ ಮರಗಳಿಗೆ ಬರತಕ್ಕ ರೋಗಗಳಿಗೆ ಅವು ಬರದಂತೆ ಮುನ್ನೆಚ್ಚರಿಕೆಯ ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಜ್ಞರು ಸಲಹೆ ಮಾಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ತೆಂಗಿನ ಗಿಡಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟಲು ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಜ್ಞರು ಆಯಾಯ ಭಾಗಗಳಿಗೆ ಹೋಗಿ ರೈತರಿಗೆ ತಿಳುವಳಿಕೆ ಯನ್ನು ಕೊಡುತ್ತಿದ್ದಾರೆ. ಇವರು ಕೇಳರತಕ್ಕ ಭಾಗದಲ್ಲಿ ತಿಳುವಳಿಕೆ ಕೊಟ್ಟಿದ್ದಾರೆ. ಅದರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಎನ್. ರಾಮಣ್ಣ.—ಈ ತೆಂಗಿನ ಗಿಡಗಳಿಗೆ ಹಾನಿಯಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ತೋಟಗಾರಿಕೆಯ ಇರಾಖೆಯವರು ಸರ್ವೆ ನಡೆಸಿ, ಎಷ್ಟು ಎಕರೆಗಳಲ್ಲಿ ಬಂದಿದೆ ಎಂದು ನೋಡಿ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಆ ಭಾಗದಲ್ಲಿ ಸುಮಾರು 75 ಎಕರೆಗಳಲ್ಲಿ ಸುಮಾರು 1,445 ಗಿಡಗಳಿಗೆ ಮಾತ್ರ ರೋಗ ತಗಲಿದೆ. ಅದರ ಪ್ರಕಾರ ಇವರು ಕಾರ್ಯಕ್ರಮ ತೆಗೆದುಕೊಂಡು ರೋಗ ಹರಡ ದಂತೆ ನೋಡಿಕೊಂಡಿದ್ದಾರೆ.

ಶ್ರೀ ಎಂ. ಎನ್. ರಾಮಣ್ಣ.—ತೆಂಗು ಬೆಳೆಯುವ ಎಲ್ಲಾ ಪ್ರದೇಶಗಳಲ್ಲೂ ರೋಗ ಇದೆ. ಇದರಿಂದ ತಿಪಟೂರಿನಲ್ಲಿ ಗಂಗಾಪಾನಿ ಎಳನೀರು ಎಂಬ ಪ್ರಸಿದ್ಧ ಜಾತಿಯ ಒಂದು ಗಿಡವೂ ಉಳಿಯುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದಕ್ಕೆ ನಿಮ್ಮ ಇರಾಖೆಯವರು ಏನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಅದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ತೆಗೆದು ಕೊಂಡಿಲ್ಲದಿದ್ದರೆ, ಮುತ್ತ ಅಲ್ಲಿಗೆ ಹೋಗಿ ನೋಡಲು ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇವೆ.

Mr. SPEAKER.—Question No. 105 and 112 may be taken up together.

## Allotment of Mechanised Boats

105. Sri RATNAKUMAR KATTEMAR (Mudabidri).—

Will the Minister of State for Fisheries and Ports be pleased to state:—

(*a*) whether a representation by Member, Legislative Assembly has been addressed to the Director of Fisheries with regard to the allotment of mechanised boats to the applicants mentioned therein;

(*b*) whether there was any reply from the South Kanara Fish Marketing Federation to the effect that four Members of the group of Sri Leeladhar Kanchar are not willing to undergo training in the Federation Yard;

(*c*) if so, whether the Federation has obtained their report in writing;

(*d*) whether it is permissible to allot mechanised boats by the Federation under the Agricultural Refinance Corporation Scheme even to members who are in groups, students or in some other services and not at all going for fishing or have not undergone any training;

(*e*) if not, the action the Government proposed to take in this matter ?

Sri H. C. LINGA REDDY (Minister of State for Fisheries and Ports).—

(*a*) Yes.

(*b*) Yes.

(*c*) No.

(*d*) Under the Agriculture Refinance Corporation Scheme the Federation will allot boats to groups of members, fishermen who are going for fishing and who have undergone training and not to students or others who do not go for fishing.

(*e*) Government are not aware of any cause for action at present.

## Allotment of Mechanised Boats

112. Sri RATNAKUMAR KATTEMAR (Mudabidri).—

Will the Minister of State for Fisheries and Ports be pleased to state :—

the number of mechanised boats that have been distributed during the years 1966-1968 ?

Sri H. C. LINGA REDDY (Minister of State for Fisheries and Ports).—

133.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಫಿಶ್ ಮಾರ್ಕೆಟಿಂಗ್ ಫೆಡರೇಶನ್ ಆಗುವ ಮುಂಚೆ ಡೈರೆಕ್ಟರ್ ಆಫ್ ಫಿಶರೀಸಿಗೆ ಕಳಿಸಿಕೊಟ್ಟಂತಹ ಅರ್ಜಿಗಳನ್ನು ಫಿಶ್ ಮಾರ್ಕೆಟಿಂಗ್ ಫೆಡರೇಶನಿಗೆ ಫಾರ್ವರ್ಡ್ ಮಾಡಿದ್ದಾರೆಯೇ ?

†ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟಿಗೆ ಡೈರೆಕ್ಟರ್ ಆಫ್ ಫಿಶರೀಸ್‌ಗೆ ಹಾಕಿದ್ದ ಅರ್ಜಿಗಳನ್ನು ಫಿಶ್ ಮಾರ್ಕೆಟಿಂಗ್ ಫೆಡರೇಶನಿಗೆ ಕಳಿಸಿದರೂ ಮತ್ತು ಮುಂದೆ ಅರ್ಜಿಗಳನ್ನು ಅಲ್ಲಿ ಹಾಕಿಕೊಳ್ಳಿ ಎಂದು ಹೇಳಿದ್ದಾರೆ.